# ನಾನು, ಬೆಳಗು ಮತ್ತು ಹಾಡು

**ನನ್ನ ಬೆಳಗು ಆರಂಭವಾಗುತ್ತಿದ್ದುದೇ ಅಪ್ಪನ ಸುಂದರ ಹಾಡಿನಿಂದ. ಹಾಡುಗಳ ಜೊತೆ ಜೊತೆಗೇ ನನ್ನ ಜೀವನದ ಪಯಣವೂ ಸಾಗುತ್ತಾ ಬಂದಿದೆ.**

**■ ಸುಕೃತ ಎಸ್.**

ಬೆಳಿಗ್ಗೆ 7 ಗಂಟೆ. ನಮ್ಮ ಮನೆಯಲ್ಲಿ ತಿಂಡಿ ಹೊತ್ತು. ಅಮ್ಮ ಬಿಸಿ ಬಿಸಿ ದೋಸೆ ಎರೆಯುವ ಸಮಯ. ನನಗೆ ಇದು ಯಾವುದೂ ಗೊತ್ತಿಲ್ಲ. ಹಾಸಿಗೆಯಲ್ಲಿ ಬೆಚ್ಚನೆಯ ನಿದ್ದೆ. 'ಏಳು ಚಿನ್ನ ಬೆಳಗಾಯ್ತು ಅಣ್ಣ... ಮೂಡಣವು ತೆರೆಯೇ ಕಣ್ಣಾ... ನಕ್ಷತ್ರ ಜಾರಿ ತಮವೆಲ್ಲ ಸೋರಿ ಮಿಗಿಲಹುದು ಬಾನ ಬಣ್ಣ...' ಎಂದು ಅಪ್ಪನ ಧ್ವನಿ ಕೇಳಿಸುತ್ತಿತ್ತು. ಇದು ನನಗೆ ಬೆಳಗಿನ ಅಲಾರಂ. ಎಷ್ಟೋ ವರ್ಷಗಳು ಅಪ್ಪ ನನಗೆ ಇದೇ ಹಾಡು ಹೇಳಿ ಎಬ್ಬಿಸುತ್ತಿದ್ದರು. ಹಾಡು ಮತ್ತು ನನ್ನ ಪಯಣ ಆರಂಭವಾಗಿದ್ದು ಹೀಗೆ...

ಹಾಡು ಎನ್ನುವುದನ್ನು ಮೊದಲಿಗೆ ನಾನು ಯಾರ ಬಾಯಲ್ಲಾದರೂ ಕೇಳಿದ್ದರೆ ಅದು ನನ್ನ ಅಪ್ಪನ ಬಾಯಲ್ಲೇ. ಅಡಿಗರ, 'ಸಿಗರೇಟಿನ ಹೊಗೆ, ಆಹಾ... ವರ್ತುಲ ವರ್ತುಲ...' ಬೇಂದ್ರೆ ಅವರ, 'ಹಕ್ಕಿ ಹಾರುತಿದೆ ನೋಡಿದಿರಾ...' ಹೀಗೆ ಅನೇಕ ಕವಿತೆಗಳನ್ನು ನಾನು ನನ್ನಪ್ಪನ ಬಾಯಲ್ಲೇ ಕೇಳಿದ್ದು. ಇದುವೇ ನನಗೆ ಬಾಲ್ಯ. ಈ ಕವಿತೆಗಳಿಗೆ ನನ್ನಪ್ಪನೇ ರಾಗ ಸಂಯೋಜಿಸುತ್ತಿದ್ದರು. ಕವಿತೆಗಳನ್ನು ತೀರಾ ರಾಗಾಲಾಪನೆ ಮಾಡಿ ಹಾಡುವುದು ಇಷ್ಟವಿಲ್ಲ. ಸಾಹಿತ್ಯವೇ ಮುಖ್ಯ ಅವರಿಗೆ. ಸಂಗೀತ ಕಲಿಯುವಾಗ ನನಗೆ ಇವೇ ಪಾಠವಾಯಿತು ಬಿಡಿ.

ಸಣ್ಣವಳಿದ್ದಾಗ ಅಮ್ಮನಿಗೆ ನೆಲ ವರೆಸಿಕೊಡುವ ಸಹಾಯ ಮಾಡುತ್ತಿದ್ದೆನಂತೆ. ದೊಡ್ಡವಳಾದ ಮೇಲೆ ಸೋಂಬೇರಿಯಾದೆ. ಆಕೆಗೆ ತ್ರಾಸು ನೀಡಿದೆ. ಇರಲಿ. ಹಾಗೆ ನೆಲ ವರೆಸಿಕೊಡುವಾಗ, ಆಮೇಲೆ ಶಾಲೆಗೆ ತಯಾರಾಗುವ ಹೊತ್ತಿನಲ್ಲಿ ನನಗೆ ಕ್ಯಾಸೆಟ್ ಕೇಳುವ ಹುಚ್ಚು. ಅಪ್ಪನ ಬಳಿ ಸಾಲು ಸಾಲು ಶಿಶುಗೀತೆಗಳ ಕ್ಯಾಸೆಟ್ ಇತ್ತು. ಬಿ.ಆರ್. ಛಾಯಾ ಅವರು ಪುಟ್ಟ ಮಗುವಿನ ದನಿಯಲ್ಲಿ ಹಾಡುತ್ತಾ, ಅವರೇ ಅಮ್ಮನ ಧ್ವನಿಯಲ್ಲಿಯೂ ಹಾಡುತ್ತಾ ಬಿಡುಗಡೆ ಮಾಡಿದ್ದ ಹಲವು ಕ್ಯಾಸೆಟ್‌ಗಳು ಮನೆಯಲ್ಲಿದ್ದವು. 'ತಟ್ಟು, ತಟ್ಟು ಚಪ್ಪಾಳೆ... ಪುಟ್ಟಾ ಮಗು...' 'ರಂಗನ ಮನೆಯ ಅಂಗಳದಲ್ಲಿ ಸಂಗೀತದ ಸಭೆ ಕೇಳಿದಿರಾ...', ಎಚ್.ಎಸ್. ವೆಂಕಟೇಶಮೂರ್ತಿ ಮತ್ತು ಬಿ.ಆರ್. ಲಕ್ಷ್ಮಣರಾವ್ ಅವರು ಬರೆದಿದ್ದ ಶಿಶುಗೀತೆಗಳೂ ನನಗೆ ನೆಚ್ಚಿನವಾಗಿದ್ದವು. 'ಎಲೆಗಳು ನೂರಾರು, ಭಾವದ ಎಳೆಗಳು ನೂರಾರು...' ಹೀಗೆ ಅನೇಕ ಗೀತೆಗಳು ಕೇಳಿಯೇ ನಾನು ಬೆಳೆದಿದ್ದೇನೆ.

ರುಡಾಲಿ ಸಿನಿಮಾದ ಹಾಡುಗಳೂ ನನಗೆ ಮೆಚ್ಚಿನವು. 'ದಿಲ್ ಹೂ ಹೂ ಕರೇ.... ಗಬರಾಯೆ...' ಆ ಸಿನಿಮಾದ ಎಲ್ಲ ಹಾಡುಗಳು ನನಗಿಷ್ಟ. ಈ ಸಿನಿಮಾದ ಕ್ಯಾಸೆಟ್ ಕೂಡ ಇತ್ತು ಮನೆಯಲ್ಲಿ. ಸ್ವಲ್ಪ ದೊಡ್ಡವಳಾದ ಮೇಲೆ ಹಿಂದಿ ಭಾಷೆ ತುಸು ತುಸು ಅರ್ಥವಾಗುವ ಹೊತ್ತಿಗೆ, ದೂರದರ್ಶನದಲ್ಲಿ ಪ್ರಸಾರವಾಗುತ್ತಿದ್ದ 'ರಂಗೋಲಿ' ಕಾರ್ಯಕ್ರಮ ನೋಡುವ ಹುಚ್ಚು ಹಚ್ಚಿಸಿಕೊಂಡೆ. ಬಾಲಿವುಡ್‌ನ ಸುಮಧುರ ಹಾಡುಗಳ ಪರಿಚಯ ಆಗಿದ್ದು ಅಲ್ಲಿಯೇ. ಬಳಿಕ, ಅಪ್ಪನಿಂದ ಆ ಹಾಡಿನ ಸಿನಿಮಾದ ಕುರಿತ ಮಾಹಿತಿ. ಹೀಗೆ ಹಾಡುಗಳ ಜೊತೆಯೇ ನನ್ನ ಪಯಣ ಇದ್ದೇ ಇತ್ತು.



ಇಷ್ಟ ಇತ್ತೊ ಇಲ್ಲವೋ ನನಗೆ ನೆನಪಿಲ್ಲ. ಅಪ್ಪ ಅಮ್ಮ ಸೇರಿ ನನ್ನನ್ನು ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಶಾಲೆಗೆ ಸೇರಿಸಿದರು. ಸಂಗೀತ ಕೇಳುತ್ತಾ ಕೇಳುತ್ತಾ, ಹಾಡುಗಳನ್ನು ಕಲಿಯುತ್ತಾ ಸಂಗೀತ ಮತ್ತು ಕವಿತೆಗಳ ಬಗ್ಗೆ ಪ್ರೀತಿ ಹುಟ್ಟಿಕೊಂಡಿತು. 'ಆಕಾಶದವರೆಗೂ ನಾ ಹೋಗಿ... ತೋರಣ ಕಟ್ಟುವೆ ಓರಣವಾಗಿ...' ಇದು ನನ್ನ ಗುರುಗಳು ನನಗೆ ಹೇಳಿಕೊಟ್ಟ ಮೊದಲು ಹಾಡು. ನನಗೆ ಎಷ್ಟು ಖುಷಿಯಾಗಿತ್ತೆಂದರೆ, ಅದಕ್ಕೆ ಪಾರವೇ ಇಲ್ಲ. ಅವತ್ತು ಮನೆಗೆ ಚಿಕ್ಕಪ್ಪ ಬಂದಿದ್ದರು. ನಾನು ಬಿಡಲೇ ಇಲ್ಲ. ನಾನು ಹಾಡುತ್ತೇನೆ ನೀನು ಕೇಳಲೇಬೇಕು ಅಂತ ನನ್ನದು ಹಟ. ನನ್ನ ಹಾಡನ್ನು ಚಿಕ್ಕಪ್ಪ ಕೇಳುವವರೆಗೂ ನಾನು ಬಿಡಲಿಲ್ಲ. ಹೀಗೆ ಮನೆಗೆ ಬಂದವರಿಗೆಲ್ಲಾ ನಾನು ಕಲಿತ ಮೊದಲ ಹಾಡಿನ ಶ್ರೋತೃಗಳು.

ನನ್ನಜ್ಜಿ ಮಾತಿಗೆ ಒಂದೊಂದು ಹಾಡು ಹೇಳುತ್ತಿದ್ದರು. ನಾನು ಕೋಪ ಮಾಡಿಕೊಂಡರೆ, ಅಜ್ಜಿ ಬೇಜಾರಾಗುತ್ತೆ ಅಂದರೆ... ಹೀಗೆ ಎಲ್ಲದಕ್ಕೂ ಆಕೆಯ ಬಳಿ ಹಾಡು ಹೇಳುತ್ತಿದ್ದೆ. 'ಊರ ಗೌಡನ ಸೊಸಿ, ನೀರ ತರುಲಿಕೆ ಹೋದ... ಅಲ್ಲೊಬ್ಬ ಜಾಣ ಒದಗಿದ...' ಇದು ಒಂದು ತರಹ ತತ್ವಪದ ರೀತಿಯ ಹಾಡು. ಘಟನೆಯ ವಿವರಣೆ. ಹೆಣ್ಣು ಗೆಲ್ಲುತ್ತಾಳೋ ಗಂಡೋ ಎನ್ನುವ ಚರ್ಚೆ. ಕೊನೆಯಲ್ಲಿ ಹೆಣ್ಣು ದೇವಿಯಾಗುತ್ತಾಳೆ. ಗಂಡು ಆಕೆಗೆ ಹೂವಿನ ಹಾರವಾಗುತ್ತಾನೆ ಎನ್ನುವಲ್ಲಿಗೆ ಹಾಡು ಮುಗಿಯುತ್ತದೆ. ಇದು ನನ್ನನ್ನೂ ಈಗಲೂ ಕಾಡುವ ಹಾಡು.

ಈಗ ನನಗೆ ನೆಚ್ಚಿನ ಹಾಡು ಎಂದೇನಿಲ್ಲ. ಎಲ್ಲ ಹಾಡುಗಳನ್ನೂ ಕೇಳುತ್ತೇನೆ. ಆದರೆ, ಹಾಡುಗಳಿಲ್ಲದೇ ನನಗೆ ದಿನದೂಡಲು ಸಾಧ್ಯವೇ ಇಲ್ಲ. ಒಂದೋ ನಾನೇ ಹಾಡುತ್ತಿರಬೇಕು. ಇಲ್ಲವೇ ಹಾಡು ಕೇಳಬೇಕು. ನನ್ನ ಜೀವಭಾವದೊಂದಿಗೆ ಹಾಡುಗಳು ಬೆರೆತು ಹೋಗಿವೆ. ಹಾಡುಗಳು ನಮ್ಮನ್ನು ರೂಪಿಸುತ್ತವೆ. ನಮ್ಮನ್ನು ತಿಳಿಗೊಳಿಸುತ್ತವೆ; ಹದಗೊಳಿಸುತ್ತವೆ. ■

ನಿಮ್ಮ ಬದುಕಿನಲ್ಲಿಯೂ ಹಾಡುತ್ತ, ಹಾಡು ಕೇಳುತ್ತ, ಹಾಡು ಗುನುಗುತ್ತ ಬದುಕು ಸಹನೀಯವೆನಿಸಿರಬಹುದು. ಸಂಭ್ರಮಿಸಿರಬಹುದು. ಸಂಕಟಪಡುವಾಗಲೂ ಇದು ನನ್ನೊಬ್ಬನದೇ ಸಂಕಟವಲ್ಲ ಎಂಬಂತೆ ಸಮಾಧಾನವನ್ನೂ ಮಾಡಿಕೊಂಡಿರಬಹುದು. ಹಾಡಿನೊಂದಿಗೆ ನಿಮ್ಮ ಸಾಂಗತ್ಯವನ್ನು ನೀವೂ ಹಂಚಿಕೊಳ್ಳಬಹುದಲ್ಲ. ಹೀಗೆ ಕಾಡುವ ಹಾಡು, ಕಾಡಿದ ಪಾಡನ್ನು ಸಹನೀಯವಾಗಿಸಿದ್ದರೆ, ನೀವೂ ಬರೆದುಕಳುಹಿಸಿ. ನೂರೈವತ್ತು ಪದಮಿತಿಯಲ್ಲಿ. ನುಡಿ ಅಥವಾ ಯುನಿಕೋಡ್‌ನಲ್ಲಿ ನಿಮ್ಮ ಲೇಖನವಿರಲಿ. **editorsu@sudha.co.in**ಗೆ ಮೇಲ್ ಮಾಡಿ.